<u>ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರಸ್ತುತ ಇರುವ ಸೌಲಭ್ಯಗಳು.</u>

******

ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಘಟಕ ಕಾಲೇಜುಗಳು, ಸಂಯೋಜಿತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ವ್ಯಾಸಂಗ ಮಾಡುವ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರತಿ ಶೈಕ್ಷಣಿಕ ಸಾಲಿನಲ್ಲಿಯೂ ವೈದ್ಯರ ವರದಿಯನುಸಾರ ಹಾಗೂ ಅಂಗವಿಕಲತೆ ಪ್ರಮಾಣಕ್ಕನುಗುಣವಾಗಿ ಸಹಾಯ ಧನವನ್ನು ವಿತರಿಸಲಾಗುತ್ತಿದೆ. ಇದಕ್ಕಾಗಿ ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ವಿಕಲಚೇತನ ವಿದ್ಯಾರ್ಥಿಗಳಿಗಾಗಿ ಆರ್ಥಿಕ ನೆರವು ಎಂಬ ಶೀರ್ಷಿಕೆಯಡಿಯಲ್ಲಿ ರೂ.50,00,000/-ಗಳನ್ನು ಮೀಸಲಿರಿಸಿದೆ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಬಯಸುವ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಶುಲ್ಕದಲ್ಲಿ ಅರ್ಜಿ ಶುಲ್ಕ ಮತ್ತು ಗುರುತಿನ ಚೀಟಿ ಶುಲ್ಕ ಹೊರತುಪಡಿಸಿ ಪೂರ್ಣ ರಿಯಾಯಿತಿಯನ್ನು ನೀಡಲಾಗುತ್ತಿದೆ ಹಾಗೂ ವಿಕಲಚೇತನ ವಿದ್ಯಾರ್ಥಿಗಳಿಗೆ ಆದ್ಯತೆಯ ಮೇರೆಗೆ ವಿದ್ಯಾರ್ಥಿನಿಲಯಗಳಲ್ಲಿ ಕೆಳ ಅಂತಸ್ತಿನಲ್ಲಿ ಶೌಚಾಲಯಕ್ಕೆ ಹತ್ತಿರವಿರುವ ಕೊಠಡಿಯನ್ನು ಒದಗಿಸಲಾಗುತ್ತಿದೆ.

ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗ್ರಂಥಾಲಯದಲ್ಲಿ 2010ರಿಂದ ದೃಷ್ಟಿ ವಿಶ್ವಾಸಿಗರ ಕೇಂದ್ರ ಸ್ಥಾಪನೆಯಾಗಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಮತ್ತು ಸಂಶೋಧನಾ ಕಾರ್ಯಗಳ ಅನುಕೂಲಕ್ಕಾಗಿ ಬೇಕಾಗುವಂತಹ ದತ್ತಾಂಶಗಳು ಮತ್ತು ತಂತ್ರಾಂಶಗಳು ಹಾಗೂ ಅತ್ಯಾಧುನಿಕ ಉಪಕರಣಗಳನ್ನು ಈ ಕೇಂದ್ರದಲ್ಲಿ ಅಳವಡಿಸಲಾಗಿದ್ದು, ಸುಮಾರು 700 ವಿದ್ಯಾರ್ಥಿಗಳಿಗೂ ಮೇಲ್ಪಟ್ಟು ಈ ಕೇಂದ್ರದಲ್ಲಿ ಲಭ್ಯವಿರುವ ಎಲ್ಲಾ ಸವಲತ್ತು ಸೌಲಭ್ಯಗಳನ್ನು ಪಡೆದುಕೊಂಡಿರುತ್ತಾರೆ ಮತ್ತು ಈಗಾಗಲೇ ಈ ಕೇಂದ್ರವು ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ರವರೆಗೆ ಕಾರ್ಯನಿರ್ವಹಿಸುತ್ತಿದ್ದು, ಅದರ ಮೇಲ್ವಿಚಾರಣೆಯನ್ನು ತಾತ್ಕಾಲಿಕ ತಾಂತ್ರಿಕ ಸಹಾಯಕರು ಹಂಗಾಮಿಯಾಗಿ ಈ ಕೇಂದ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. 2010ನೇ ಇಸವಿಯಿಂದಲೂ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಗಳಾಗಲಿ ಅಥವಾ ಸೇವಾ ದೃಷ್ಟಿಯಿಂದ ಯಾವುದೇ ಅಡಚಣೆಗಳಾಗಲಿ ಬಾರದಂತೆ ದೃಷ್ಟಿ ವಿಶ್ವಾಸಿಗರ ಕೇಂದ್ರದಲ್ಲಿ ಲಭ್ಯವಿರುವ 10 ಕಂಪ್ಯೂಟರ್‌ಗಳು ಹಾಗೂ ಬ್ರೇಲ್ ಪ್ರಿಂಟರ್ಸ್, Screen readers Software's, Angle, Plex Talk, Daisy Readers ಉಪಕರಣಗಳನ್ನು, ಬ್ರೇಲ್ ಪುಸ್ತಕಗಳನ್ನು ಮತ್ತ ತಂತ್ರಾಂಶಗಳನ್ನು ಬಳಸಿಕೊಂಡು ಉತ್ತಮ

ಸೇವೆಯನ್ನು ನೀಡುತ್ತಿದೆ. ಈ ಕೇಂದ್ರದ ಮೇಲ್ವಿಚಾರಣೆ ಹಾಗೂ ನಿರ್ವಹಣೆಯು UPE Focus Area all ರವರು ನೀಡಿರುವ ಆರ್ಥಿಕ ನೆರವಿನಿಂದ ಇದುವರೆವಿಗೂ ನಡೆದುಕೊಂಡು ಬಂದಿರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಸ್ಕೀಂ-ಎ ಅಡಿಯಲ್ಲಿ ನಿಗಧಿಪಡಿಸಲಾಗಿರುವ 3% ಸೀಟುಗಳಲ್ಲಿ ಪ್ರತಿ ಕೋರ್ಸಿಗೆ 01 ಸೀಟನ್ನು ಅಂಗವಿಕಲರಿಗಾಗಿ ಮೀಸಲರಿಸಿದೆ. ಮತ್ತು 50% ಕ್ಕಿಂತ ಕಡಿಮೆ ಇಲ್ಲದಂತೆ ಅಂಗವಿಕಲತೆ ಇದ್ದು, ಪ್ರಾಧ್ಯಾಪಕ ಅರ್ಹತೆಯುಳ್ಳ (Orthopedics in the Government Medical College Hospital) ವ್ಯಕ್ತಿಯಿಂದ ಪ್ರಮಾಣಿತಗೊಂಡಿರುವ ವಿದ್ಯಾರ್ಥಿಗಳಗೂ ಸಹ ಪ್ರವೇಶಾತಿಯಲ್ಲಿ ಮೀಸಲರಿಸಲಾಗಿದೆ ಹಾಗೂ ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಕೋರ್ಸುಗಳಗೆ ಒಟ್ಟಾರೆಯಾಗಿ 15 ಸೀಟುಗಳನ್ನು, ಪ್ರತಿ ಕೋರ್ಸಿಗೆ ಒಂದು ಸೀಟು ಮೀರದಂತೆ, ಅಂಗವಿಕಲರಿಗೆ ಈಗಾಗಲೇ ಮೀಸಲರಿಸಲಾಗಿದೆ.

ಅಲ್ಲದೇ ದಿನಾಂಕ 19.06.2018 ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯದನ್ವಯ ವಿಕಲಚೇತನ ವಿದ್ಯಾರ್ಥಿಗಳಗೆ ಇನ್ನೂ ಹೆಚ್ಚುವರಿಯಾಗಿ ಈ ಕೆಳಕಂಡ ಸೌಲಭ್ಯವನ್ನು ಮುಂಬರುವ ಶೈಕ್ಷಣಿಕ ವರ್ಷಗಳಲ್ಲಿ ನೀಡಲಾಗುವುದು. ಇದರ ಬಗ್ಗೆ ಈಗಾಗಲೇ ಸರ್ಕಾರದ ಅನುಮೋದನೆ ಕೋರಿ ಪತ್ರ ವ್ಯವಹರಿಸಲಾಗಿದೆ.

1. ಎಲ್ಲಾ ಸರ್ಕಾರಿ ಮತ್ತು ಸರ್ಕಾರದ ದೇಣಿಗೆ ಪಡೆಯುತ್ತಿರುವ ಉನ್ನತ ಶಿಕ್ಷಣ ಸಂಸ್ಥೆಗಳು ನಿರ್ದಿಷ್ಟ ಮಾನದಂಡ ಅಂಗವಿಕಲತೆ ಇರುವವರಿಗೆ (Benchmark Disability) ಕನಿಷ್ಟ ಶೇ. 05 ರಷ್ಟು ಸ್ಥಾನಗಳನ್ನು (Seats) ಮೀಸಲಿಡುವುದು.
2. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಿರ್ದಿಷ್ಟ ಮಾನದಂಡದ ಅಂಗವಿಕಲತೆ ಇರುವವರಿಗೆ (Benchmark Disability) ಪ್ರವೇಶದ ವಯೋಮಿತಿಯಲ್ಲಿ 05 ವರ್ಷಗಳ ರಿಯಾಯಿತಿ.

M. Y[illegible]

ಉಪ ಕುಲಸಚಿವರು(ಶೈಕ್ಷಣಿಕ),